

**ಎಡದಿಂದ ಬಲಕ್ಕೆ :**

1. ಆಕೆಯ ಅಜ್ಜನಿಗೆ ಅದೇಕೋ ಎಲ್ಲದರಲ್ಲೂ ಹೆದರಿಕೆ 3
3. ಭಾರೀ ಸಂಭಾವನೆ ದೊರಕಿದ್ದು ಆಕೆಯ ಒಳ್ಳೇ ಅದೃಷ್ಟ 3
4. ಆ ಶಿಲಾಮೂರ್ತಿಯ ಕೆತ್ತನೆಯಲ್ಲಿ ಎಂಥ ಸೊಬಗು ನೋಡಿ 3
6. ಕಿರಿ ಕಿರಿ ಮಾಡುತ್ತಲೇ ಕಾಲವಾದದ್ದು ಕೌರವ ವಂಶ 4
7. ಹಂಗು ತೊರೆದವರ ಜೊತೆಗೂ ಇದೆಂಥ ದ್ವೇಷ! 4
9. ವೇದ ಮಂತ್ರದ ಉಚ್ಚಾರಣೆಯಲ್ಲೂ ಬಗೆ ಬಗೆ ಉಂಟೇ? 4
11. ಒಂದೇ ಪದ್ಯವನ್ನೇ ಓದಿ ಓದಿ ಪಡೆದದ್ದು ಈ ಭಿಕ್ಷೆ 4
15. ವ್ಯಾಪಾರದಲ್ಲಿ ಬೇರೂರುವ ಮೊದಲೇ ಬಂದೆರಗಿತು ಯುದ್ಧ 3
16. ವ್ಯಾಕುಲನಾಗಿದ್ದವನಿಗೆ ನೆಮ್ಮದಿ ಒದಗಿಸಿದ್ದು ಇದೇ ಪುಟ್ಟ ಕಾವ್ಯ 3
17. ಕೆಟ್ಟ ಕವಿಯ ಪ್ರತಿ ವಾಕ್ಯವೂ ವಕ್ರ, ವಿಕಾರ 3

**ಮೇಲಿಂದ ಕೆಳಕ್ಕೆ:**

1. ಆತನ ಭುಜದ ಮೇಲೆ ನೋಡಿ, ಎಂಥ ಸುಂದರ ತಾವರೆ! 3
2. ಕಾಲೆಳೆಯುವವರು ಕಂಡೊಡನೆ ಸಿಟ್ಟಾಗು 3
3. ಸಖ್ಯವನ್ನು ಗಳಿಸಿಕೊಳ್ಳಲು ಮುಂಜಾನೆಯೇ ಸರಿ 3
5. ತೊಗರಿ ಬೇಳೆಯನ್ನು ಮಾರಿದ್ದಕ್ಕೂ ಸುಂಕ ನೀಡಬೇಕೇ? 3
6. ಕಾವಲು ನಿಲ್ಲುವವನ ತಲೆಗೊಂದು ಬೆಚ್ಚನೆಯ ಟೊಪ್ಪಿಗೆ 3
8. ವೈನತೇಯನ ಈ ಅಲಂಕಾರ ಸಂಪೂರ್ಣ ಹೊಸದು 3
10. ವೇಳೆ ಇಲ್ಲವೆಂಬ ನೆಪ ನೀಡಿ ಎಲ್ಲವೂ ತಡ 3
12. ವಿಪಿನದಲ್ಲಿದ್ದು ಬಂದದ್ದು ಬದುಕು ಶುದ್ಧವಾಯಿತು 3
13. ಭಯವಿರದಂತೆ ಮಾಡುವ ದುರ್ಗೆಯ ಹೆಸರು; ಅದ್ಭುತ ಸಂಗೀತ ರಾಗ ಕೂಡ 3
14. ಸುಂಕಗಳನ್ನು ಕಟ್ಟಿ, ಕಟ್ಟಿ ... ಅದೇ ಒಂದು ವ್ಯಥೆ 3

---

## 13-02-2020 ಉತ್ತರಗಳು

**ಎಡದಿಂದ ಬಲಕ್ಕೆ:**

1.ಉದಾಸೀನ 3.ಕಂಬಳಿ 4. ಮನುಜ 6. ಆಯವ್ಯಯ 7. ರಜನೀಶ 9. ಶತವಿಧ 12. ಶಾಖಾಹಾರಿ 14. ಗಣಪ 15. ಬಾಳಿಕೆ ; 16. ತಿರುಮಲೆ

**ಮೇಲಿಂದ ಕೆಳಕ್ಕೆ:**

1. ಉಳಿತಾಯ 2. ನಮಸ್ಕಾರ 3. ಕಂದಾಯ 5. ಜರನೀ (=ನೀರಜ ತಲೆಕೆಳಗು ) 6. ಆಶಾಪಾಶ 8. ಶತಾವರಿ 10. ತರಂಗ 11. ಧನಪತಿ 12. ಶಾಲಾ ಬಾಲೆ 13. ಹಾರೈಕೆ

ಪ್ರಶ್ನಾ ಂಕಣ

# ಪಗೋಡಾ: ಅದೇನು ನಿರ್ಮಿತಿ?

ಪಗೋಡಾ; ಅದೊಂದು ಬಗೆಯ ದೇವಾಲಯ. ವಾಸ್ತವವಾಗಿ ಅದು ಬೌದ್ಧ ಧರ್ಮಾನುಯಾಯಿಗಳ ಪವಿತ್ರ ದೇಗುಲ. ಭಗವಾನ್ ಬುದ್ಧನ ಮೂರ್ತಿಗಳನ್ನು, ಬುದ್ಧನಿಗೆ ಮತ್ತು ನಂತರದ ಬೌದ್ಧ ಮುನಿಗಳಿಗೆ ಸಂಬಂಧಿಸಿದ ಅವಶೇಷಗಳನ್ನು ಹಾಗೂ ಬೌದ್ಧ ಧರ್ಮದ ಪವಿತ್ರ ಗ್ರಂಥಗಳನ್ನು ಭದ್ರವಾಗಿ ಸಂರಕ್ಷಿಸಿಡಲು ಮತ್ತು ಪೂಜಿಸಲು ನಿರ್ಮಿಸಲಾಗಿರುವ ಕಟ್ಟಡಗಳು ಅವು.

ಪಗೋಡಾಗಳದು ತುಂಬ ವಿಶಿಷ್ಟ ವಾಸ್ತು ವಿನ್ಯಾಸ; ಬೌದ್ಧ 'ಸ್ತೂಪ' ಗಳಿಗೇ ಸಂಬಂಧಿಸಿದ, ಅವನ್ನೇ ಮಾರ್ಪಡಿಸಿದ ವಿನ್ಯಾಸ. ಸಾಮಾನ್ಯವಾಗಿ ಗೋಪುರ ರೂಪದ ಅಥವಾ ಶಂಕುವಿನಾಕಾರದ ಶಿರದ, ಬಹು ಮಹಡಿಗಳ, ಭಾರೀ ಔನ್ನತ್ಯದ ಕಟ್ಟಡಗಳು ಅವು (ಚಿತ್ರ 1, 2 ಗಮನಿಸಿ). ಶಿಲೆ, ಇಟ್ಟಿಗೆ ಅಥವಾ ಮರದಿಂದ ಅವುಗಳ ನಿರ್ಮಾಣ. ಕಟ್ಟಡದೊಳಗೆ ಬಂಗಾರ, ಬೆಳ್ಳಿ ಅಥವಾ ಶಿಲೆಯ ವಿಶೇಷ ಪೆಟ್ಟಿಗೆಗಳಲ್ಲಿ ಪವಿತ್ರ ವಸ್ತುಗಳ ಸಂರಕ್ಷಣ.

ಪಗೋಡಾಗಳದು ಸುದೀರ್ಘ ಇತಿಹಾಸ. ಕ್ರಿಸ್ತ ಪೂರ್ವ ಮೂರನೆಯ ಶತಮಾನ ಅವುಗಳ ಅವತರಣದ ಕಾಲ. ಹಾಗೆಂದರೆ ಪಗೋಡಾಗಳದು 2,200 ವರ್ಷಗಳನ್ನೂ ಮೀರಿದ ಪ್ರಾಚೀನತೆ. ಬೌದ್ಧ ಧರ್ಮದ ಮೂಲ ನೆಲೆಯಾದ ಏಷಿಯ ಖಂಡದಲ್ಲೇ (ಭೂ ಪಟ ನೋಡಿ) ಪಗೋಡಾಗಳ ಪ್ರಧಾನ ಅಸ್ತಿತ್ವ. ಮಯನ್ಮಾರ್ (ಬರ್ಮಾ), ಚೀನಾ, ಜಪಾನ್, ಥಾಯ್ ಲ್ಯಾಂಡ್, ವಿಯಟ್ನಾಂ ಮತ್ತು ನೇಪಾಳ ರಾಷ್ಟ್ರಗಳಲ್ಲಿ ಪಗೋಡಾಗಳು



ಹೇರಳ. ಅವುಗಳಲ್ಲೂ ಮಯನ್ಮಾರ್‌ನಲ್ಲೇ ಪಗೋಡಾಗಳದು ಅತ್ಯಧಿಕ ಸಂಖ್ಯೆ. ಒಂದು ಕಾಲದಲ್ಲಿ ಅಲ್ಲಿದ್ದ ಪಗೋಡಾಗಳ ಸಂಖ್ಯೆ ನಾಲ್ಕು ದಶ ಲಕ್ಷಕ್ಕೂ ಅಧಿಕ ! ಪ್ರಸ್ತುತ ಅಲ್ಲಿ ಭದ್ರವಾಗಿ ಉಳಿದಿರುವ ಪಗೋಡಾಗಳು ಸುಮಾರು ಮೂರು ಸಾವಿರ. ಆದ್ದರಿಂದಲೇ ಮಯನ್ಮಾರ್ ರಾಷ್ಟ್ರಕ್ಕೆ 'ಪಗೋಡಾಗಳ ನಾಡು' ಎಂಬ ಉಪನಾಮ ಕೂಡ.

ಮಯನ್ಮಾರ್ ನ 'ಯಾಂಗಾನ್' ನಲ್ಲಿರುವ 'ಶ್ವೇಡಗಾನ್ ಪಗೋಡಾ' ವಿಶ್ವ ಪ್ರಸಿದ್ಧ. 326 ಅಡಿ ಎತ್ತರದ, ಗುಮ್ಮಟ ಶಿರದ, ಸ್ತೂಪ ರೂಪದ ಈ ಪಗೋಡಾ 60 ಟನ್ ಬಂಗಾರದಿಂದ ಲೇಪನಗೊಂಡು ವಜ್ರದ 5,500 ಹರಳುಗಳಿಂದ ಅಲಂಕರಿಸಲ್ಪಟ್ಟಿದೆ. ಹಾಗಾಗಿ 'ದಿ ಗೋಲ್ಡನ್ ಪಗೋಡಾ' ಎಂಬ ಅಭಿದಾನವನ್ನೂ ಪಡೆದಿದೆ. ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಪುರಾತನವಾದ ಈ ಪಗೋಡಾದಲ್ಲಿ ಗೌತಮ ಬುದ್ಧನ ತಲೆಕೂದಲಿನ ನಾಲ್ಕು ಎಳೆಗಳು ಸಂರಕ್ಷಿಸಲ್ಪಟ್ಟಿವೆ. ಅದೇ ದೇಶದ 'ಬಾಗನ್'ನಲ್ಲಿರುವ 2,200 ಪಗೋಡಾಗಳಲ್ಲೊಂದಾದ 'ಶ್ವೇಜಿಗಾನ್ ಪಗೋಡಾ'ದಲ್ಲಿ ಭಗವಾನ್ ಬುದ್ಧನ 'ಮೂಳೆ ಮತ್ತು ಹಲ್ಲು' ಸುರಕ್ಷಿತವಾಗಿವೆ. ಹಾಗಾಗಿ ಶ್ವೇಡಗಾನ್ ಪಗೋಡಾದಂತೆಯೇ ಶ್ವೇಜಿಗಾನ್ ಪಗೋಡಾ ಕೂಡ ಪರಮ ಪವಿತ್ರ ಸ್ಥಾನ ಹೊಂದಿದೆ. ಅಲ್ಲಿನದೇ 'ಮಹಾಮುನಿ ಪಗೋಡಾ'ದಲ್ಲಿ ಬುದ್ಧನ ನಾಲ್ಕು ಮೀಟರ್ ಎತ್ತರದ ಕಂಚಿನ ಪ್ರತಿಮೆ ಇದೆ.

**ಎನ್. ವಾಸುದೇವ್**